ಶ್ರೀ ಕೆ. ಕಂಶಾಲ.—ಮಾನ್ಯ ಅಧ್ಯಕ್ಷರೇ, ಮಲೆನಾಡು ಪ್ರದೇಶವಾದ ಬೆಳ್ಳಾರೆಯಲ್ಲಿ ಕಾಲೇಜು ಆಗಬೇಕು ಎಂದು ಮನವಿ ಬಂದಿದ್ದರೂ ಕೂಡಾ ೮೬–೮೭ನೇ ಸಾಲಿನಲ್ಲೂ ಕೂಡಾ ಹಣದ ಸಂಪನ್ಮೂಲ ಇಲ್ಲ, ಅಲ್ಲಿಗೆ ಕಾಲೇಜು ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದೀರಿ. ಮಲೆನಾಡು ಪ್ರದೇಶದಲ್ಲಿ ಇದು ಬಹಳ ಅಗತ್ಯವಿರುವುದರಿಂದ ೧೯೮೭–೮೮ ನೇ ಸಾಲಿನಲ್ಲಾದರೂ ಇದನ್ನು ಸೇರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ಮಂಜುನಾಥ್.—ಈ ವರ್ಷ ಕೂಡಾ ತೀರ್ಮಾನ ಮಾಡಿಲ್ಲ. ನಮಗೆ ಹಣದ ತೊಂದರೆಯಿಂದ ಈ ವರ್ಷ ಕಾಲೇಜನ್ನು ಮಾಡುವುದಕ್ಕಾಗುವುದಿಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದೇವೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೆ, ಮಲೆನಾಡು ಪ್ರದೇಶವಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದೇ ಒಂದು ಶಾಲೆ ಮಾತ್ರ ಇದೆ, ಬೇರೆ ಇಲ್ಲ. ಆದುದರಿಂದ ಈ ದೃಷ್ಟಿಯಿಂದಲಾದರೂ ಪ್ರಥಮ ದರ್ಜೆ ಕಾಲೇಜನ್ನು ಕೊಡುವ ಹಾಗೆ ಕ್ರಮ ಕೈಗೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಡಿ. ಮಂಜುನಾಥ್.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಥಮ ದರ್ಜೆ ಕಾಲೇಜುಗಳು ಬಹಳ ಇವೆ. ಮತ್ತೆ ಈ ವರ್ಷ ಅಲ್ಲಿಗೆ ಮತ್ತೊಂದು ಕೊಡುವುದು ಬಹಳ ಕಷ್ಟ ಇದೆ. ಮುಂದಿನ ವರ್ಷ ಯೋಚನೆ ಮಾಡೋಣ.

ಪ್ರಶ್ನೆ ೩೧೩(೯೭೦) ಹೆಚ್. ಕೆ. ಕಂಪಾರಸ್ವಾಮಿ	ಸದಸ್ಯರು
ಪ್ರಶ್ನೆ ೩೧೪(೯೩೫) ವಸಂತ ಬಂಗೇರ	ಹಾಜರಿಲ್ಲ.

ರಾಜ್ಯದಲ್ಲಿರುವ ತಾಂತ್ರಿಕ ಕಾಲೇಜುಗಳು

೯೪೪. ಶ್ರೀ ಎಸ್. ಕೆ. ಕಾಂತಾ (ಗುಲ್ಬರ್ಗ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಮಾನ್ಯತೆ ಪಡೆದ ಖಾಸಗಿ ತಾಂತ್ರಿಕ ಕಾಲೇಜುಗಳ ಸಂಖ್ಯೆ ಎಷ್ಟು ? ಜಿಲ್ಲಾವಾರು ವಿವರಗಳನ್ನು ಕೊಡುವುದು :

ಆ) ರಾಜ್ಯದ ಗ್ರಾಮಾಂತರ ಭಾಗಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಕಾಲೇಜುಗಳನ್ನು ಪ್ರಾರಂಭ ಮಾಡಲಾಗಿದೆ, ಮತ್ತು ಗುಲ್ಬರ್ಗಾ ಜಿಲ್ಲೆಯಲ್ಲಿ ಅಂಥ ಖಾಸಗಿ ಕಾಲೇಜುಗಳ ವಿವರ ನೀಡುವುದು ;

ಇ) ಕೆಲವು ಖಾಸಗಿ ಕಾಲೇಜುಗಳು ಮಾನ್ಯತೆ ಪಡೆಯದೆ ಇದ್ದರೂ ತಾಂತ್ರಿಕ ಕಾಲೇಜು ನಡೆಸುತ್ತಿದ್ದಾರೆಯೇ ಹಾಗಿದ್ದಲ್ಲಿ ಅವರ ಮೇಲೆ ತೆಗೆದುಕೊಂಡ ಕ್ರಮವೇನು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ೩೪ : ಜಿಲ್ಲಾವಾರು ವಿವರಗಳನ್ನು ಲಗತ್ತಿಸಿದೆ (ಅನುಬಂಧ–೧)

ಆ) ಎರಡು ಗುಲ್ಬರ್ಗಾ ಜಿಲ್ಲೆಯಲ್ಲಿ ಗ್ರಾಮಾಂತರ ಭಾಗದಲ್ಲಿ ಕಳೆದ ಮೂರು ವರ್ಷದಲ್ಲಿ ಖಾಸಗಿ ತಾಂತ್ರಿಕ ಕಾಲೇಜನ್ನು ಪ್ರಾರಂಭಿಸಿಲ್ಲ.

ಇ) ಮಾನ್ಯತೆ ಪಡೆಯದ ತಾಂತ್ರಿಕ ಕಾಲೇಜು ಯಾವುದೂ ಇಲ್ಲ.

ಕರ್ನಾಟಕ ರಾಜ್ಯದಲ್ಲಿರುವ ಜಿಲ್ಲಾವಾರು ಇಂಜಿನಿಯರಿಂಗ್ ಕಾಲೇಜುಗಳು

ಬೆಂಗಳೂರು ಜಿಲ್ಲೆ

---

೧) ಎಂ. ಎಸ್. ರಾಮಯ್ಯ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಗೋಕುಲ ಎಕ್ಸ್‌ಟೆನ್‌ಷನ್, ಪೋಸ್ಟ್ ಬೆಂಗಳೂರು–೫೬೦೦೫೪

೨) ಆರ್. ವಿ. ಇಂಜಿನಿಯರಿಂಗ್ ಕಾಲೇಜು,
ಮೈಸೂರು ರಸ್ತೆ, ಬೆಂಗಳೂರು-೫೬೦೦೫೯

೩) ದಯಾನಂದ್ ಸಾಗರ್ ಇಂಜಿನಿಯರಿಂಗ್ ಕಾಲೇಜು,
ಶಾವಿಗೆ ಮಲ್ಲೇಶ್ವರ ಹಿಲ್ಸ್, ಸೌತ್ ಎಂಡ್, ಜಯನಗರ,
ಕನಕಪುರ ರಸ್ತೆ, ಬೆಂಗಳೂರು-೫೬೦೦೭೮

೪) ಬೆಂಗಳೂರು ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ,
ವಿಶ್ವೇಶ್ವರಪುರಂ, ಕೆ. ಆರ್. ರಸ್ತೆ, ಬೆಂಗಳೂರು-೫೬೦೦೦೪

೫) ಇಸಲಾಮಿಯ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ
ನ್ಯಾಷನಲ್ ಪಾರ್ಕ್ ರಸ್ತೆ, ಬೆಂಗಳೂರು-೫೬೦೦೭೬

೬) ಡಾ॥ ಅಂಬೇಡ್ಕರ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ
ಮಲ್ಲತಹಳ್ಳಿ (ಜಾನ ಭಾರತಿ ಹತ್ತಿರ)
ಬೆಂಗಳೂರು-೫೬೦೦೫೬

೭) ಗೌಸಿಯ ಇಂಜಿನಿಯರಿಂಗ್ ಕಾಲೇಜು,
ರಾಮನಗರಂ, ಬೆಂಗಳೂರು-೫೬೧೫೧೧

೮) ಎಂ. ಡಿ. ಜೆ. ಇಂಜಿನಿಯರಿಂಗ್ ಕಾಲೇಜು,
(ವೈಟ್‌ಫೀಲ್ಡ್ ಹತ್ತಿರ) ಬೆಂಗಳೂರು-೫೬೦೦೬೭

ಬೆಳಗಾಂ ಜಿಲ್ಲೆ

೯) ಕೆ.ಎಲ್.ಇ. ಸೊಸೈಟಿಸ್ ಇಂಜಿನಿಯರಿಂಗ್ ಕಾಲೇಜು, ಬೆಳಗಾಂ-೫೯೦೦೦೮

೧೦) ಕೆ.ಎಲ್.ಎಸ್. ಸೊಸೈಟಿಸ್ ಗೋಗಟೆ ಇಂಜಿನಿಯರಿಂಗ್ ಕಾಲೇಜು,
ಟಿಲಕವಾಡಿ, ಬೆಳಗಾಂ-೫೯೦೦೬

ಬಳ್ಳಾರಿ ಜಿಲ್ಲೆ

೧೧) ವಿಜಯನಗರ ಇಂಜಿನಿಯರಿಂಗ್ ಕಾಲೇಜು,
ಬಳ್ಳಾರಿ-೫೮೩೧೦೨

ಬೀದರ್ ಜಿಲ್ಲೆ

೧೨) ಗುರುನಾನಕ್ ದೇವ್ ಇಂಜಿನಿಯರಿಂಗ್ ಕಾಲೇಜು,
ಬೀದರ್ ಮೈಲಾರ್ ರಸ್ತೆ, ಬೀದರ್-೫೮೫೫೪೩

೧೩) ರೂರಲ್ ಇಂಜಿನಿಯರಿಂಗ್ ಕಾಲೇಜು, ಬಾಲ್ಕಿ-೫೮೫೩೩೮

ಬಿಜಾಪುರ ಜಿಲ್ಲೆ

೧೪) ಬಿ.ಎಲ್.ಡಿ.ಇ.ಎಸ್. ಇಂಜಿನಿಯರಿಂಗ್ ಕಾಲೇಜು
ಬಿಜಾಪುರ
ಚಿಕ್ಕಮಂಗಳೂರು ಜಿಲ್ಲೆ

೧೫) ಆದಿಚುಂಚನಗಿರಿ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ
ಪಿ.ಬಿ ನಂ. ೯೧, ಆದಿಚುಂಚನಗಿರಿ ಎಕ್ಸ್‌ಟೆನಷನ್
ಚಿಕ್ಕಮಂಗಳೂರು-೫೭೭೧೦೨

ಚಿತ್ರದುರ್ಗ ಜಿಲ್ಲೆ

೧೬ ಬಾಪೂಜಿ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಆಂಡ್ ಟೆಕ್ನಾಲಜಿ, ದಾವಣಗೆರೆ–೫೭೭೦೦೨

೧೭ ಜೆ.ಎಂ. ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ ಚಿತ್ರದುರ್ಗ–೫೭೭೫೦೨

ದಕ್ಷಿಣ ಕನ್ನಡ ಜಿಲ್ಲೆ

೧೮) ಮಂಗಳೂರು ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ ಮಂಗಳೂರು–೫೭೪೧೧೯

೧೯) ನಿಟ್ಟೆ ಎಜುಕೇಷನ್ ಟ್ರಸ್ಟ್‌ನ ಇಂಜಿನಿಯರಿಂಗ್ ಕಾಲೇಜು ನಿಟ್ಟೆ–೫೭೪೧೧೦

೨೦) ಆಕಡವಿಂ ಆಫ್ ಲಿಬರಲ್ ಎಜುಕೇಷನ್ ಇಂಜಿನಿಯರಿಂಗ್ ಕಾಲೇಜು, ಸುಳಿಯ–೫೭೪೫೩೩

ಧಾರವಾಡ ಜಿಲ್ಲೆ

೨೧) ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜ್ ಆಫ್ ಇಂಜಿನಿಯರಿಂಗ್, ಧಾರವಾಡ–೫೮೦೦೦೨

೨೨) ಎಸ್.ಟಿ.ಜೆ. ಎಜುಕೇಷನ್ ಸೊಸೈಟಿಸ್ ಇಂಜಿನಿಯರಿಂಗ್ ಕಾಲೇಜು, ರಾಣೆಬೆನ್ನೂರ್–೫೮೧೧೮೫

೨೩) ರೂರಲ್ ಇಂಜಿನಿಯರಿಂಗ್ ಕಾಲೇಜು, ಹುಲ್‌ಕೊಟ್, ಧಾರವಾಡ–೫೮೨೨೦೫

ಗುಲ್ಬರ್ಗ ಜಿಲ್ಲೆ

೨೪) ಖಾಜಾ ಬಂಡೆ ನವಾಸ್ ಇಂಜಿನಿಯರಿಂಗ್ ಕಾಲೇಜು ರೌಜಾ ಬರ್ಗ, ಗುಲ್ಬರ್ಗ–೫೮೫೧೦೪

ಕೋಲಾರ ಜಿಲ್ಲೆ

೨೫) ಗೋಲ್ಡನ್ ವ್ಯಾಲ್ಲೀಸ್ ಎಜುಕೇಷನ್ ಟ್ರಸ್ಟ್ ಇಂಜಿನಿಯರಿಂಗ್ ಕಾಲೇಜು, ಕೆ.ಜಿ.ಎಫ್.–೫೬೩೧೧೨

೨೬) ಕೃಷ್ಣ ದೇವರಾಯ ಎಜುಕೇಷನ್ ಟ್ರಸ್ಟ್ ಇಂಜಿನಿಯರಿಂಗ್ ಕಾಲೇಜು ಮಂದ್ಲೇನಹಳ್ಳಿ, ಚಿಕ್ಕಬಳ್ಳಾಪುರ ಕೋಲಾರ ಜಿಲ್ಲೆ.

೨೭) ಆದಿಚುಂಚನಗಿರಿ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ ಚಿಕ್ಕಬಳ್ಳಾಪುರ

ರಾಯಚೂರ್ ಜಿಲ್ಲೆ

೨೮) ಹೆಚ್.ಕೆ.ಇ. ಸೊಸೈಟೀಸ್ ಇಂಜಿನಿಯರಿಂಗ್ ಕಾಲೇಜು ಪಿ.ಬಿ.ನಂ. ೬೦, ವಿರ್‌ಮಾರಸ್ ಕ್ಯಾಂಪ್, ರಾಯಚೂರ್–೫೮೪೧೦೩

ಶಿವಮೊಗ್ಗ ಜಿಲ್ಲೆ

೨೯) ಜವಹರ್‌ಲಾಲ್ ನೆಹರು ನ್ಯಾಷನಲ್ ಕಾಲೇಜು ಆಫ್ ಇಂಜಿನಿಯರಿಂಗ್, ಶಿವಮೊಗ-ಶೆ೭೨೨೧೧

ತುಮಕೂರು ಜಿಲ್ಲೆ

೩೦) ಸಿದ್ಧಗಂಗಾ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ ತುಮಕೂರು-ಶೆ೭೨೧೦೩

೩೧ ಸಿದ್ಧಗಂಗಾ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ (ಕಂಡಂನ್ಸ್‌ಡ್ ಕೋರ್ಸು) ತುಮಕೂರು

೩೨) ಸಿದ್ಧಾರ್ಥ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಮಾರಲೂರು, ತುಮಕೂರು-ಶೆ೭೨೧೦೫

೩) ಕಲ್ಪತರು ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ ತಿಪಟೂರು-ಶೆ೭೨೨೦೨

ಉತ್ತರ ಕನ್ನಡ ಜಿಲ್ಲೆ

೩೪) ಅಂಜುಮಾನ್ ಇಂಜಿನಿಯರಿಂಗ್ ಕಾಲೇಜು. ಭಟಕಲ್-ಶೆ೫೧೩೨೦

ಶ್ರೀ ಎಸ್. ಕೆ. ಕಾಂತಾ — ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಈ ಪ್ರಶ್ನೆಯ (ಅ)ಗೆ ಉತ್ತರವಾಗಿ ಒಟ್ಟು ರೂರಲ್ ೩೪ ಇಂಜನೀಯರಿಂಗ್ ಕಾಲೇಜುಗಳು ರಾಜ್ಯದಲ್ಲಿ(ಇದ್ದಾವೆ ಎಂದು ಅದರ ಒಂದು ಪಟ್ಟಿಯನ್ನು ನಮಗೆ ಕೊಟ್ಟಿದ್ದಾರೆ. ಅವರು ಕೊಟ್ಟಿರುವ ಈ ಪಟ್ಟಿಯನ್ನು ನೋಡಿದಾಗ ಅದರಲ್ಲಿ ಗುಲ್ಬರ್ಗ ಜಿಲ್ಲೆಯಲ್ಲಿ ಕಾಜಾಬಂದೆ ನವಾಸ್ ಇಂಜಿನೀಯರಿಂಗ್ ಕಾಲೇಜು ಕೌಸಾ ಬರ್ಗ, ಇದು ಒಂದು ಹೆಸರು ಮಾತ್ರ ಇದೆ. ನಾನು ಹೇಳುವುದೇನೆಂದರೆ ಅಲ್ಲಿ ಎರಡು ಕಾಲೇಜುಗಳು ಇವೆ. ಪಟ್ಟಿಯಲ್ಲಿ ಒಂದು ಮಾತ್ರ ಇದೆ. ಇನ್ನೊಂದು ಎಲ್ಲಿ ಹೋಯಿತು ಸ್ವಾಮಿ ?

ಶ್ರೀ ಡಿ. ಮಂಜುನಾಥ್.—ಅಲ್ಲಿ ಒಂದು ಏಡೆಡ್ ಇದೆ ಇನ್ನೊಂದು ಪ್ರೈವೇಟ್ ಇದೆ. ಪ್ರೈವೇಟ್ ಇರುವುದನ್ನು ಈ ಲಿಸ್ಟ್‌ನಲ್ಲಿ ಬಿಟ್ಟು ಬಿಟ್ಟಿದ್ದಾರೆ.

ಶ್ರೀ ಎಸ್. ಕೆ. ಕಾಂತಾ.—ಮಾನ್ಯ ಮಂತ್ರಿಗಳು ರಾಜ್ಯದಲ್ಲಿ ಒಟ್ಟು ೩೪ ತಾಂತ್ರಿಕ ಕಾಲೇಜುಗಳು ಇವೆ ಎನ್ನುವ ಒಂದು ಪಟ್ಟಿ ಕೊಟ್ಟಿದ್ದಾರೆ. ಈ ಬಗ್ಗೆ ನಾನು ಕೇಳುವುದೇನೆಂದರೆ ಮುಂದಿನ ವರ್ಷ ಇನ್ನಾವುದಾದರೂ ಬೇರೆ ಇಂಜಿನೀಯರಿಂಗ್ ಕಾಲೇಜುಗಳು ಪ್ರಾಡುವ ವಿಚಾರ ಇದೆಯೇ ?

ಶ್ರೀ ಡಿ. ಮಂಜುನಾಥ್.—ಯಾರಾದರೂ ಖಾಸಗೀಯವರು ಆಲ್ಲಿಗೆ ಯಾವುದಾದರೂ ಕಾಲೇಜುಗಳು ಬೇಕು ಎನ್ನುವುದಾದರೆ ಅವರು ಮೊದಲು ವಿಶ್ವವಿದ್ಯಾನಿಲಯಕ್ಕೆ ಅರ್ಜಿ ಹಾಕಬೇಕು. ಅವರು ಅದನ್ನು ಶಿಫಾರಸ್ಸು ಮಾಡುವುದಾದರೆ ಅದು ಸರ್ಕಾರಕ್ಕೆ ಬರುತ್ತದೆ. ನನಗೆ ತಿಳಿದ ಹಾಗೆ ಕಳೆದ ಸಾರಿ ವಿಶ್ವವಿದ್ಯಾನಿಲಯದವರಿಂದ ಕಾಲೇಜುಗಳು ಬೇಕು ಎನ್ನುವುದರ ಬಗ್ಗೆ ಶಿಫಾರಸ್ಸು ಮಾಡಿರುವುದು ಯಾವುದೂ ಬರಲಿಲ್ಲ. ಯಾರು ಅರ್ಜಿ ಹಾಕಿದರೂ ಕೂಡ ಅದು ಸರ್ಕಾರಕ್ಕೆ ಬರುತ್ತದೆ. ಅದು ಬಂದಾಗ ಅದನ್ನು ನಾವು ಪರಿಶೀಲನೆ ಮಾಡುತ್ತೇವೆ.

ಪ್ರಶ್ನೆ ೩೧೬ (೯೧೦) ಶ್ರೀ ವೇದಾಂತ ಹೆಮ್ಮಿಗೆ	ಸದಸ್ಯರು ಹಾಜರಿಲ್ಲ.
ಪ್ರಶ್ನೆ ೩೧೬ (೪೧೩) ಶ್ರೀ ಕೆ. ಬಿ. ಮಲ್ಲಪ್ಪ	
ಪ್ರಶ್ನೆ ೩೧೮ (೧೧೩೧) ಶ್ರೀ ಶಿವಶೇಖರಪ್ಪಗೌಡ ಸಿರಪಾಲ್	ಸದಸ್ಯರು ಹಾಜರಿಲ್ಲ.

ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯನ್ನು ಅನಂತರ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಆಗಬಹುದು. ಮಾನ್ಯ ಲೋಕೋಪಯೋಗಿ ಸಚಿವರ ಹೆಸರಿನಲ್ಲಿರುವ ಪ್ರಶ್ನೆಗಳನ್ನು ಅವರು ಸಭೆಗೆ ಬಂದನಂತರ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರು ಸಭೆಗೆ ಬರಲು ಸಾಧ್ಯವಾಗದಿದ್ದರೆ ಅವರ ಪರವಾಗಿ ಬೇರೆಯವರು ಉತ್ತರ ಕೊಡಬಹುದಲ್ಲವೇ ?

ಅಧ್ಯಕ್ಷರು.—ಬೇರೆಯವರು ಉತ್ತರ ಕೊಟ್ಟರೆ, ಸಂಬಂಧಪಟ್ಟ ಮಂತ್ರಿಗಳೇ ಬರಲಿ ಎಂದು ಕೆಲವರು ಹೇಳುತ್ತಾರೆ. ಆದ್ದರಿಂದ ಅವರು ಬರಲಿ. ಅವರು ಸ್ವಲ್ಪ ನಿಧಾನವಾಗಿ ಬರುವುದಾಗಿ ನನಗೆ ತಿಳಿಸಿದ್ದಾರೆ.

ಕಾಪು ಕ್ಷೇತ್ರದಲ್ಲಿರುವ ಕಿರಿಯ ಕಾಲೇಜನ್ನು ಪೂರ್ಣ ಪ್ರಮಾಣದ ಕಾಲೇಜನ್ನಾಗಿ ಪರಿವರ್ತಿಸುವುದು.

೧೦೭೮. ಶ್ರೀ ವಸಂತ ವಿ. ಸಾಲ್ಯಾನ (ಕಾಪು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಾಪು ಕ್ಷೇತ್ರದ ಸರಕಾರಿ ಮೀನುಗಾರಿಕಾ ಜೂನಿಯರ್ ಕಾಲೇಜನ್ನು ಪೂರ್ಣ ಪ್ರಮಾಣದ ಕಾಲೇಜಾಗಿ ಪರಿವರ್ತಿಸಬೇಕೆಂದು ಸರಕಾರದವರ ಗಮನಕ್ಕೆ ಬಂದಿದೆಯೇ,

ಆ) ಸದರಿ ಕಾಲೇಜನ್ನು ಪೂರ್ಣ ಪ್ರಮಾಣದ ಕಾಲೇಜಾಗಿ ಪರಿವರ್ತಿಸಲು ಬೇಡಿಕೆಗಳು ಏನಾದರೂ ಸಾರ್ವಜನಿಕರಿಂದ ಬಂದಿವೆಯೆ,

ಇ) ಹಾಗಿದ್ದಲ್ಲಿ, ಸದರಿ ಕಾಲೇಜನ್ನು ಪೂರ್ಣ ಪ್ರಮಾಣದ ಕಾಲೇಜಾಗಿ ಪರಿವರ್ತಿಸಲು ಯಾವಾಗ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ಇಲ್ಲ.

ಆ) ಇಲ್ಲ.

ಇ) ೧೯೮೭-೮೮ರ ಸಾಲಿನಲ್ಲಿ ಪ್ರಥಮ ದರ್ಜೆ ಕಾಲೇಜುಗಳಿಗೆ ಮಂಜೂರು ನೀಡಬಾರದೆಂದು ಸರ್ಕಾರವು ನಿರ್ಧರಿಸಿದೆ. ಆರ್ಥಿಕ ಸಂಪನ್ಮೂಲಗಳು ಸುಧಾರಿಸಿದೊಡನೆ ಈ ಬಗ್ಗೆ ಪರಿಶೀಲಿಸಲಾಗುವುದು.

ಶ್ರೀ ವಸಂತ ವಿ. ಸಾಲಿಯಾನ.—ಇಲ್ಲಿ ನನ್ನ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ 'ಸರ್ಕಾರದ ಗಮನಕ್ಕೆ ಬಂದಿಲ್ಲ' ಎಂದು ಹೇಳಿದ್ದಾರೆ. ಆದರೆ ಈ ಬಗ್ಗೆ ಮಾನ್ಯ ಮಂತ್ರಿಗಳಿಗೆ ಮೂರು ಕಾಗದ ಗಳನ್ನು ಬರೆದಿದ್ದೇನೆ. ಆದ್ದರಿಂದ ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳುವುದು ತಪ್ಪು ಅಭಿಪ್ರಾಯವಾಗಿದೆ. ಮತ್ತು ನನ್ನ ಎರಡನೆಯ ಪ್ರಶ್ನೆಗೆ ಉತ್ತರವಾಗಿ ಈ ಬಗ್ಗೆ ಸಾರ್ವಜನಿಕರಿಂದ ಬೇಡಿಕೆಗಳು ಬಂದಿಲ್ಲವೆಂದು ಹೇಳಿದ್ದಾರೆ. ಆದರೆ ಮಾನ್ಯ ಮಂತ್ರಿಗಳೇ ಈ ಬಗ್ಗೆ ೧೯೮೭-೮೮ನೇ ಸಾಲಿನಲ್ಲಿ ಇದನ್ನು ಪರಿಶೀಲನೆ ಮಾಡಿಕೊಡುವುದಾಗಿ ನನಗೆ ಪತ್ರ ಬರೆದಿದ್ದಾರೆ. ಈಗ ನನ್ನ ಕ್ಷೇತ್ರದಲ್ಲಿ ಸರ್ಕಾರದ ಕಾಲೇಜು ಇಲ್ಲದ ಕಾರಣ ವಿದ್ಯಾರ್ಥಿಗಳು ೨೦ ಕಿಲೋಮೀಟರ್ ದೂರದ ಬೇರೆ ಕಾಲೇಜಿಗೆ ಹೋಗಬೇಕಾಗಿದೆ. ಡೆಪ್ಯೂಟಿ ಡೈರಕ್ಟರ್ ಆಫ್ ಕೊಲಿಜಿಯೇಟ್ ಎಜುಕೇಷನ್ ಅವರು ಫೆಬ್ರುವರಿ ಕೊನೆಯಲ್ಲಿ ಅಲ್ಲಿಗೆ ಬಂದು ಈ ಬಗ್ಗೆ ಇನ್ಸ್‌ಪೆಕ್ಷನ್ ಮಾಡಿ ಆ ಭಾಗಕ್ಕೆ ಪೂರ್ಣ ಪ್ರಮಾಣದ ಕಾಲೇಜು ಕೊಡುವುದು ಒಳ್ಳೆಯದೆಂದು ರೆಕಾರ್ಡ್ ಮಾಡಿ ಹೋಗಿದ್ದಾರೆ. ಆದ್ದರಿಂದ ಅಲ್ಲಿಗೆ ಆದಷ್ಟು ಬೇಗ ಪೂರ್ಣ ಪ್ರಮಾಣದ ಮೀನುಗಾರಿಕಾ ಕಾಲೇಜನ್ನು ಪ್ರಾರಂಭ ಮಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್ —ಈ ಬಗ್ಗೆ ಮಾನ್ಯ ಸದಸ್ಯರು ನನಗೆ ಅರ್ಜಿ ಕಳುಹಿಸಿಕೊಟ್ಟರು. ನಂತರ ತನಿಖೆ ಮಾಡಿ ವಿವರವಾದ ವರದಿಯನ್ನು ಕಳುಹಿಸಿಕೊಡಿ ಎಂದು ನಾನು ಅಧಿಕಾರಿಗಳಿಗೆ ತಿಳಿಸಿದೆ. ಅವರಿಂದ ನನಗೆ ಇನ್ನೂ ವರದಿ ಬಂದಿಲ್ಲ. ಈಗ ಅಲ್ಲಿರುವ ಕಾಲೇಜನ್ನು ಅಪ್-ಗ್ರೇಡ್